# <u>ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ನ್ಯಾದಂ. ನ್ಯಾಯಾಲಯ, ಕುಣಿಗಲ್.</u>

## <u>ಸಿ.ಸಿ. 9063/2022</u>

ಫಿರ್ಯಾದುದಾರರುಃ ಹುಲಿಯೂರುದುರ್ಗ ಪೊಲೀಸರು

ವಿರುದ್ಧ

ಆರೋಪಿಗಳು : ರಮೇಶ.ಡಿ.ಟಿ. ಮತ್ತು ಇತರರು,

## <u>*ದೋಷಾರೋಪಣೆ*</u>

**ಶ್ರೀಮತಿ ಗಂಗವ್ವ. ಆಯಟಿ,** ಬಿ.ಎ.ಎಲ್..ಎಲ್.ಬಿ., (Hon's) ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ಕುಣಿಗಲ್ ಆದು ನಾನು, ಆರೋಪಿಗಳಾದ,

| | |
|---|---|
| 1. | ರಮೇಶ.ಡಿ.ಟಿ. ಬಿನ್ ತಿಮ್ಮಯ್ಯ,<br>ವಯಸ್ಸುಃ 43 ವರ್ಷ, |
| 2. | ಗೋವಿಂದಯ್ಯ ಬಿನ್ ತಿಮ್ಮಯ್ಯ,<br>ವಯಸ್ಸುಃ 60 ವರ್ಷ, |
| 4. | ತಿಮ್ಮಯ್ಯ ಬಿನ್ ಲೇಟ್ ಕರಿಯಪ್ಪ,<br>ವಯಸ್ಸುಃ 87 ವರ್ಷ, |
| | ಎಲ್ಲರ ವಾಸಃ ದೊಡ್ಡಹಳ್ಳಿ ಗ್ರಾಮ, ಅಮೃತೂರು ಹೋಬಳಿ, ಕುಣಿಗಲ್ ತಾಲ್ಲೂಕು. |

ನಿಮ್ಮ ಮೇಲೆ ಇಡುವ ಆರೋಪಗಳು ಏನೆಂದರೆ,

ದಿನಾಂಕಃ 14.10.2022 ರಂದು ಸಂಜೆ 5.30 ಗಂಟೆ ಸಮಯದಲ್ಲಿ ಕುಣಿಗಲ್ ತಾಲ್ಲೂಕು, ಹುಲಿಯೂರುದುರ್ಗ ಪೋಲಿಸ್ ಠಾಣಾ ಸರಹದ್ದು, ದೊಡ್ಡಕಲ್ಲಹಳ್ಳಿ ಗ್ರಾಮದ

ಬೋರೇಗೌಡರವರ ವಾಸದ ಮನೆಯ ಮುಂಭಾಗ ಹಾದು ಹೋಗಿರುವ ದೊಡ್ಡಕಲ್ಲಹಳ್ಳಿ ಗ್ರಾಮದ ಸಾರ್ವಜನಿಕ ರಸ್ತೆಯಲ್ಲಿ ಚಾಸಾ–1 ಮತ್ತು ಚಾಸಾ–2 ರವರು ತಮ್ಮ ಗದ್ದೆಯ ಕಡೆಯಿಂದ ಎಮ್ಮೆಗಳನ್ನು ಹಿಡಿದುಕೊಂಡು ಮನೆಗೆ ಹೋಗಲು ನಡೆದುಕೊಂಡು ಬರುತ್ತಿದ್ದಾಗ ಆರೋಪಿತರುಗಳಾದ ನೀವೆಲ್ಲರೂ ಸಮಾನ ಉದ್ದೇಶದಿಂದ ಚಾಸಾ–1 ರವರ ಮೇಲೆ ಗಲಾಟೆ ಮಾಡಬೇಕೆಂಬ ದುರುದ್ದೇಶದಿಂದ ಚಾಸಾ–1 ಮತ್ತು 2 ರವರ ಬಳಿ ಹೋಗಿ ಆರೋಪಿ–1 ಆದ ನೀನು ಏಕಾಏಕಿ ದೊಣ್ಣೆಯಿಂದ ಚಾಸಾ–1 ರವರ ಎಡತಲೆಗೆ, ಎಡಭುಜಕ್ಕೆ, ಬಲ ಮೆಣಕೈಗೆ ಹೊಡೆದು ಸಾಮಾನ್ಯ ಸ್ವರೂಪದ ರಕ್ತಗಾಯ ಪಡಿಸಿದ್ದು, ಆರೋಪಿ–2 ಆದ ನೀನು ಕಲ್ಲಿನಿಂದ ಚಾಸಾ–1 ರವರ ಎಡ ತೋಳಿಗೆ ಹೊಡೆದು ನೋವುಂಟು ಮಾಡಿ ರಕ್ತಗಾಯ ಪಡಿಸಿದ್ದುದರ ಪ್ರಯುಕ್ತ ಭಾ.ದಂ.ಸಂ. ಕಲಂ 324 ಸಹವಾಚಕ 34 ರ ಅಡಿಯಲ್ಲಿ ನನ್ನ ಸಂಜ್ಞೆಯಲ್ಲಿ ಅಪರಾಧ ಎಸಗಿರುತ್ತೀರಿ?

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಗಳಾದ ನೀವೆಲ್ಲರೂ ಸೇರಿಕೊಂಡು ಚಾಸಾ–1 ರವರನ್ನು ಕುರಿತು ಇವತ್ತು ಬದುಕಿದ್ದೀಯಾ ಇನ್ನೊಂದು ಸಲ ನೀನೇನಾದರೂ ಮನೆಯ ಮುಂಭಾಗದ ದಾರಿಯ ವಿಚಾರಕ್ಕೆ ಬಂದರೆ ನಿನ್ನನ್ನು ಜೀವಂತವಾಗಿ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಕಿದ್ದುದರ ಪ್ರಯುಕ್ತ ನೀವೆಲ್ಲರೂ ಭಾ.ದಂ.ಸಂ. ಕಲಂ 506 ಸಹವಾಚಕ 34 ರ ಅಡಿಯಲ್ಲಿ ನನ್ನ ಸಂಜ್ಞೆಯಲ್ಲಿ ಅಪರಾಧ ಎಸಗಿರುತ್ತೀರಿ?

**(ಮೇಲಿನ ಆಪಾದನೆಯನ್ನು ರಚಿಸಿ, ಆರೋಪಿಗಳಿಗೆ ಓದಿ ಹೇಳಿದಾಗ ಆರೋಪಿಗಳು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ.)**

ದಿನಾಂಕಃ 27 ನೇ ಫೆಬ್ರವರಿ –2024

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಕುಣಿಗಲ್.

ಪ್ರಶ್ನೆ ಃ 1 ಈ ಮೇಲೆ ಓದಿ ಹೇಳಿದ ಆರೋಪಣೆ ನಿಮಗೆ ತಿಳಿಯಿತೇ?

ಉತ್ತರ ಃ ಆರೋಪಿ 1 :

ಆರೋಪಿ 2 :

ಆರೋಪಿ 3 :

ಪ್ರಶ್ನೆ ಃ 2 ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕೋ?

ಉತ್ತರ ಃ ಆರೋಪಿ 1 :

ಆರೋಪಿ 2 :

ಆರೋಪಿ 3 :

**(ಮೇಲಿನ ಆಪಾದನೆಯನ್ನು ರಚಿಸಿ, ಆರೋಪಿಗಳಿಗೆ ಓದಿ ಹೇಳಿದಾಗ ಆರೋಪಿಗಳು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ.)**

ದಿನಾಂಕಃ 27 ನೇ ಫೆಬ್ರವರಿ –2024

ಹೆಚ್ಚುವರಿ ಹಿರಿಯ ಸಿವಿಲ್
ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಕುಣಿಗಲ್.